ಕರ್ನಾಟಕ ಉಚ್ಚ ನ್ಯಾಯಾಲಯ

(ಧಾರವಾಡ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎಸ್.ಎನ್. ಸತ್ಯನಾರಾಯಣ ಮತ್ತು

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಪಿ.ಜಿ.ಎಮ್. ಪಾಟೀಲ್

ಭಂಗಾರ ಬಿಸ್ತಾ ನಾಯಕ ದಸನ್ ಮೃತರಾಗಿರುವುದರಿಂದ ಇವರ ಕಾನೂನು ಸಮ್ಮತ ವಾರಸ್ಸುದಾರರು ವಿರುದ್ಧ ಜಿಲ್ಲಾಧಿಕಾರಿ, ಉತ್ತರ ಕನ್ನಡ ಜಿಲ್ಲೆ, ಕರ್ನಾಟಕ ರಾಜ್ಯ

ರಿಟ್ ಅಪೀಲುಸಂಖ್ಯೆ: 100022/2015 (ಎಸ್ಸಿ/ಎಸ್ಟಿ), ದಿನಾಂಕ 25 ನೇ ಸೆಪ್ಟೆಂಬರ್, 2019

ತೀರ್ಪು

ನ್ಯಾಯಮೂರ್ತಿ ಶ್ರೀ ಎಸ್.ಎನ್. ಸತ್ಯನಾರಾಯಣ

ಈ ನ್ಯಾಯಾಲಯದ ಮಾನ್ಯ ಏಕಪೀಠ ನ್ಯಾಯಾಧೀಶರ ಕಡತದಲ್ಲಿನ ರಿಟ್ ಅರ್ಜಿಸಂಖ್ಯೆ: 24411/2005 (ಎಸ್ಸಿ/ಎಸ್ಟಿ) ರಲ್ಲಿನ 1 ನೇ ಎದುರುದಾರರು, ಅದರಲ್ಲಿ ಹೊರಡಿಸಿದದಿನಾಂಕ: 15.12.2014 ರ ಆದೇಶವನ್ನು ಪ್ರಶ್ನಿಸಿ ಈ ಮೇಲ್ಮನವಿಯೊಂದಿಗೆ ಬಂದಿದ್ದಾರೆ.

2. ಈ ಅಂತರ್-ನ್ಯಾಯಾಲಯ ಮೇಲ್ಮನವಿಗೆ ಕಾರಣವಾಗಿರುವ ಸಂಕ್ಷಿಪ್ತ ಸಂಗತಿಗಳು ಹೀಗಿವೆ:ಮೇಲೆ ಹೇಳಿದ ರಿಟ್ ಅರ್ಜಿಯನ್ನು, ಕರ್ನಾಟಕ ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಪಂಗಡಗಳ (ಕೆಲವು ಜಮೀನುಗಳ ವರ್ಗಾವಣೆಯ ನಿಷೇಧ) 1978 ರ (ಸಂಕ್ಷಿಪ್ತವಾಗಿ ಪಿಟಿಸಿಎಲ್ ಅಧಿನಿಯಮ) 4 ನೇ ಮತ್ತು 5 ನೇ ಪ್ರಕರಣಗಳ ಅಡಿಯಲ್ಲಿ ಇದರಲ್ಲಿನ 3 ನೇ ಎದುರುದಾರಳು ಸಲ್ಲಿಸಿದ್ದ,ಸಂಖ್ಯೆ: ಪಿಟಿಸಿಎಲ್-ವೈವಾ -1/04-05ರಲ್ಲಿನ ವ್ಯವಹರಣೆಗಳಲ್ಲಿ ಸಹಾಯಕ ಆಯುಕ್ತರು, ಸಿರ್ಸಿ ಉಪ-ವಿಭಾಗ, ಸಿರ್ಸಿ ಇವರು ಹೊರಡಿಸಿದ ಆದೇಶವನ್ನು ಪ್ರಶ್ನಿಸಿ, ಇದರಲ್ಲಿನ ಮೇಲ್ಮನವಿದಾರರಾದ ಭಂಗಾರ ಬಿಸ್ತಾ ನಾಯಕ್ (ದಸನ್) ನಿಂದ, ಸಿರ್ಸಿ ತಾಲೂಕಿನ ಕಾಂತರಾಜಿ ಗ್ರಾಮದ ಸರ್ವೆಸಂಖ್ಯೆ: 232 ರಲ್ಲಿ, 8 ಎಕರೆ 19 ಗುಂಟೆಗಳ ವಿಸ್ತೀರ್ಣದ ಜಮೀನಿನ ಪುನಃಸ್ಥಾಪನೆಯನ್ನು ಕೋರಿ ಸಲ್ಲಿಸಲಾಗಿದೆ.

3. ಒಪ್ಪಿಕೊಂಡಂತೆ ಮೇಲೆ ಹೇಳಿದ ಜಮೀನನ್ನು ಫಕೀರಾ ಛಲವಾದಿ ಹೆಸರಿನ ಇದರಲ್ಲಿನ 3 ನೇ ಎದುರುದಾರಳ ಪತಿಯ ಹೆಸರಿಗೆದಿನಾಂಕ: 30.07.1958 ರಂದು ಮಂಜೂರು ಮಾಡಲಾಗಿದೆ.ಆ ತರುವಾಯ, ಸದರಿ ಜಮೀನನ್ನುದಿನಾಂಕ: 25.07.1972 ರಂದು, ಎಂದರೆ ಇದರಲ್ಲಿನ ಮೇಲ್ಮನವಿದಾರನ ಹೆಸರಿನಲ್ಲಿ ಕ್ರಯಪತ್ರವನ್ನು ಬರೆದುಕೊಡುವುದಕ್ಕೆ ನಾಲ್ಕು ದಿನಗಳ ಮುಂಚೆ, ಸಿರ್ಸಿಯ ಸಹಾಯಕ ಆಯುಕ್ತರಿಂದ ಅನುಮತಿಯನ್ನು ಪಡೆದು ತರುವಾಯದಲ್ಲಿ ಬರೆದುಕೊಟ್ಟ ನೋಂದಾಯಿತ ಕ್ರಯಪತ್ರದ ಮೇರೆಗೆ ಮೇಲ್ಮನವಿದಾರ ಭಂಗಾರ ತಂದೆ:ಬಿಸ್ತಾ ನಾಯಕ್ (ದಸನ್) ಹೆಸರಿಗೆ ಮೇಲೆ ಹೇಳಿದ ವಿಸ್ತೀರ್ಣದ ಜಮೀನನ್ನು ಆತನು ಮಾರಿದ ದಿನವಾದದಿನಾಂಕ: 29.07.1972 ರವರೆಗೆ ಫಕೀರಾ ಛಲವಾದಿಯ ಸ್ವಾಧೀನ, ಸಾಗುವಳಿ ಮತ್ತು ಅನುಭೋಗದಲ್ಲಿತ್ತು.ಆ ತರುವಾಯ, ಸದರಿ ವಿಸ್ತೀರ್ಣದ ಜಮೀನನ್ನುದಿನಾಂಕ: 20.05.1973 ರ ಆದೇಶದ ಮೂಲಕ ಎಮ್.ಇ.ಸಂಖ್ಯೆ: 1320 ರ ಮೂಲಕ ಇದರಲ್ಲಿನ ಮೇಲ್ಮನವಿದಾರನ ಹೆಸರಿಗೆ ಹಕ್ಕು ಬದಲಾವಣೆ ಮಾಡಲಾಗಿತ್ತು.

4. 1972 ನೇ ಸಾಲಿನಲ್ಲಿ, ಮೇಲ್ಮನವಿದಾರನ ಹೆಸರಿಗೆ ಜಮೀನನ್ನು ಮಾರಾಟ ಮಾಡಿದ ಮೂಲ ಮಂಜೂರಾತಿ ಪಡೆದವನಿಂದ ಇದರಲ್ಲಿನ ಮೇಲ್ಮನವಿದಾರನು ಪ್ರಶ್ನೆಯಲ್ಲಿರುವ ಜಮೀನಿನ ಸ್ವಾಧೀನ, ಸಾಗುವಳಿ ಮತ್ತು ಅನುಭೋಗಕ್ಕೆ ಯಾವುದೇ ಪ್ರತಿರೋಧವಿರದೆ, 3 ನೇ ಎದುರುದಾರಳ ಪತಿ ಫಕೀರಾ ಛಲವಾದಿಯ ಮರಣದವರೆಗೆ ಸದರಿ ಸ್ಥಿತಿಯು ಮುಂದುವರಿದಿತ್ತೆಂಬುದು ಕಂಡುಬರುತ್ತದೆ.ದಿನಾಂಕ: 18.12.2002 ರಂದು ಮೃತನಾದ ಫಕೀರಾ ಛಲವಾದಿಯ ಮರಣಾನಂತರ, ಆತನ ಪತ್ನಿ ಇದರಲ್ಲಿನ 3 ನೇ ಎದುರುದಾರಳು, ಇದರಲ್ಲಿನ ಮೇಲ್ಮನವಿದಾರನ ಹೆಸರಿನಲ್ಲಿ ಪ್ರಶ್ನೆಯಲ್ಲಿರುವ ಜಮೀನನ್ನು ವರ್ಗಾಯಿಸುವಲ್ಲಿ ಆಕೆಯ ಪತಿಯು ಮಂಜೂರಾತಿ ಷರತ್ತನ್ನು ಉಲ್ಲಂಘಿಸಿರುವನೆಂಬ ಕಾರಣದ ಮೇಲೆ, ಆತನ ವಿಧವಾ ಪತ್ನಿಯು ಮೇಲೆ ಹೇಳಿದ

ಪುನಃಸ್ಥಾಪನೆಯನ್ನು ಕೋರಿದಿನಾಂಕ: 22.3.2003 ರಂದು ಅರ್ಜಿಯ ಮೂಲಕ 2 ನೇ ಎದುರುದಾರರಾದ ಸಹಾಯಕ ಆಯುಕ್ತರು, ಸಿರ್ಸಿ ಉಪ ವಿಭಾಗ, ಸಿರ್ಸಿ ಇವರನ್ನು ಸಂಪರ್ಕಿಸಿದ್ದು, ತರುವಾಯದಲ್ಲಿ ಅದನ್ನು ಪಿಟಿಸಿಎಲ್ ಅಧಿನಿಯಮ, 1978 ಜಾರಿಗೆ ಬರುವ ಮೊದಲೇ 3 ನೇ ಪಕ್ಷಕಾರರ ಹೆಸರಿಗೆ ವರ್ಗಾಯಿಸಲಾಗಿರುವ ಜಮೀನುಗಳ ಪುನಃಸ್ಥಾಪನೆ ಕೋರಲು ಮಂಜೂರಾತಿ ಪಡೆದವರಿಗೆ ಹಕ್ಕನ್ನು ಮೀಸಲಿರಿಸುವ ಕುರಿತು ಜಾರಿಗೆ ಬಂದಿದ್ದ ಸದರಿ ಅಧಿನಿಯಮದ ಅಧಿನಿಯಮಿತಿಗೆ ಅನುಗುಣವಾಗಿ ಅಸಿಂಧುವೆಂದು ನಿರ್ಣಯಿಸಲಾಯಿತು.

5. ಮೇಲೆ ಹೇಳಿದ ಉಪಬಂಧವು ಇದಕ್ಕೆ ಅನ್ವಯವಾಗುತ್ತಿದ್ದಾಗ್ಯೂ, ಅರ್ಜಿಯನ್ನು ಸಲ್ಲಿಸಲಾಗಿದೆ.ಅರ್ಜಿಯಲ್ಲಿ, ಮೂಲ ಮಂಜೂರಾತಿ ಪಡೆದ ಮಾರಾಟಗಾರ ಫಕೀರಾ ಛಲವಾದಿಯ ವಿರುದ್ಧ ಜಮೀನಿನ ಖರೀದಿ ಮೂಲಕ ಮೋಸ ಎಸಗಲಾಗಿರುವ ಆರೋಪವಿತ್ತು.ಇದರಲ್ಲಿನ 3 ನೇ ಎದುರುದಾರಳು ಸಲ್ಲಿಸಿದ್ದ ಅರ್ಜಿಯನ್ನು, ವ್ಯವಹರಣೆಸಂಖ್ಯೆ: ಪಿಟಿಸಿಎಲ್ -1/04-05 ಪ್ರಕಾರ ನೋಂದಾಯಿಸಲಾಗಿದ್ದು, ವಿಚಾರಣೆ ನಡೆಸಿದ ತರುವಾಯ, 2 ನೇ ಎದುರುದಾರರಾದ ಸಹಾಯಕ ಆಯುಕ್ತರು, ಮೂಲ ಮಂಜೂರಾತಿ ಪಡೆದವನು ಮತ್ತು ಇದರಲ್ಲಿನ ಮೇಲ್ಮನವಿದಾರನ ನಡುವೆ ಮಾರಾಟ ವ್ಯವಹಾರವು, 2 ನೇ ಎದುರುದಾರರಿಂದ ಅಗತ್ಯ ಅನುಮತಿಯನ್ನು ಪಡೆದ ತರುವಾಯ, ಕರ್ನಾಟಕ ಭೂ ಮಂಜೂರಾತಿ ನಿಯಮಗಳ 9 ನೇ ನಿಯಮದ ಮೇರೆಗೆ ಅಗತ್ಯಪಡಿಸಿದಂತೆದಿನಾಂಕ: 25.7.1972 ರಂದು ಮಾರಾಟಗಾರನ ಹೆಸರಿಗೆ ಮಂಜೂರು ಮಾಡಲಾಗಿತ್ತು ಮತ್ತು ತದನುಸಾರವಾಗಿ 3 ನೇ ಎದುರುದಾರಳು ಸಲ್ಲಿಸಿದ್ದ ಅರ್ಜಿಯನ್ನುದಿನಾಂಕ: 3.11.2004 ರ ಆದೇಶದ ಮೂಲಕ ತಿರಸ್ಕರಿಸಲಾಗಿತ್ತು ಎಂದು ಕಂಡುಬರುತ್ತದೆ.

6. ಪಿಟಿಸಿಎಲ್ 1/04-05ರಲ್ಲಿ 2 ನೇ ಎದುರುದಾರರಾದ ಸಹಾಯಕ ಆಯುಕ್ತರ ಆದೇಶದ ವಿರುದ್ಧ 3 ನೇ ಎದುರುದಾರಳು, 1 ನೇ ಎದುರುದಾರಾದ ಜಿಲ್ಲಾಧಿಕಾರಿಗಳಲ್ಲಿ ಮೇಲ್ಮನವಿಸಂಖ್ಯೆ: 3/2004-5ನ್ನು ಸಲ್ಲಿಸಿದ್ದು, ಅದನ್ನುದಿನಾಂಕ: 19.9.2005 ರ ಆದೇಶದ ಮೂಲಕ ವಜಾಗೊಳಿಸಲಾಗಿತ್ತು ಮತ್ತು ಅದು ರಿಟ್ ಅರ್ಜಿಸಂಖ್ಯೆ: 24411/2005 ರಲ್ಲಿ ಈ ನ್ಯಾಯಾಲಯದ ಮಾನ್ಯ ಏಕಪೀಠ ನ್ಯಾಯಾಧೀಶರ ಮುಂದೆ ಪ್ರಶ್ನೆಯ ವಸ್ತು ವಿಷಯವಾಗಿತ್ತು ಎಂದು ಕಂಡುಬರುತ್ತದೆ.

7. ಸದರಿ ವ್ಯವಹರಣೆಗಳಲ್ಲಿ, ಮಾನ್ಯ ಏಕಪೀಠ ನ್ಯಾಯಾಧೀಶರು, ಮೈಸೂರು ಭೂ ಮಂಜೂರಾತಿ ನಿಯಮಗಳು, 1968 ರ 40 ನೇ ನಿಯಮದ ಉಪಬಂಧಗಳನ್ನು ಹಾಗೂ ಭೂ ಮಂಜೂರಾತಿ ಸಂಬಂಧದಲ್ಲಿ ಹೊರಡಿಸಿದ ಸ್ಥಾಯಿ ಆದೇಶಗಳನ್ನು ಪರಿಭಾಷಿಸುವ ಮೂಲಕ ಜಿಲ್ಲಾಧಿಕಾರಿಗಳ ಹಾಗೂ ಸಹಾಯಕ ಆಯುಕ್ತರ ಆದೇಶವನ್ನು ತಳ್ಳಿ ಹಾಕಿದರು; ತತ್ಪರಿಣಾಮವಾಗಿ, ಈ ಅಂತರ್-ನ್ಯಾಯಾಲಯ ಮೇಲ್ಮನವಿಯಲ್ಲಿ ಮಾನ್ಯ ಏಕಪೀಠ ನ್ಯಾಯಾಧೀಶರ ಮುಂದೆ 1 ನೇ ಎದುರುದಾರರು ಪ್ರಶ್ನಿಸಿರುವ ಇದರಲ್ಲಿನ ಮೇಲ್ಮನವಿದಾರರ ಹೆಸರಿನಲ್ಲಿ ಮಾರಾಟ ಮಾಡಲಾಗಿದ್ದ, ಜಮೀನಿನ ಪುನಸ್ಥಾಪನೆಗೆ ನಿರ್ದೇಶಿಸಿದರು.

8. ಈ ನ್ಯಾಯಾಲಯದ ಮುಂದೆ ಪರಿಗಣನೆಗಾಗಿ ಈ ಮೇಲ್ಮನವಿಯು ಬಂದ ಸಮಯಕ್ಕಾಗಲೇ, ಪಿಟಿಸಿಎಲ್ ಅಧಿನಿಯಮದ ಉಪಬಂಧಗಳನ್ನು ಉಲ್ಲಂಘಿಸಿ ಮಾರಾಟ ಮಾಡಿದ ಜಮೀನಿನ ಪುನಃಸ್ಥಾಪನೆ ಕೋರಿ ಮೂಲ ಮಂಜೂರಾತಿ ಪಡೆದವನ ಹಕ್ಕನ್ನು, ವರದಿಯಾದ ಛೇದಿ ಲಾಲ್ ಯಾದವ್ ಮತ್ತು ಇತರರು-ವಿರುದ್ಧ ಹರಿ ಕಿಶೋರ್ ಯಾದವ್ (ಡಿ) ಕಾನೂನುಸಮ್ಮತ ವಾರಸುದಾರರು ಮತ್ತು ಇತರರು - . ಎಲ್ಡಬ್ಲ್ಯುಎಸ್ (ಎಸ್ಸಿ) 2017-4-146, ಮೊಕದ್ದಮೆಯ ವಿಷಯದಲ್ಲಿ ಸರ್ವೋಚ್ಚ ನ್ಯಾಯಾಲಯವು ಉಪಬಂಧದ ವಿಮೋಚನೆಯ ಬಗ್ಗೆ ಉಲ್ಲೇಖಿಸಿತ್ತು.ಅದನ್ನು ನೆಕ್ಕಂತಿ ರಾಮ ಲಕ್ಷ್ಮಿ -ವಿರುದ್ಧ ಕರ್ನಾಟಕ ರಾಜ್ಯ ಮತ್ತು ಇನ್ನೊಬ್ಬರು - ಸಿವಿಲ್ ಮೇಲ್ಮನವಿಸಂಖ್ಯೆ: 1390/2009, ಮೊಕದ್ದಮೆಯ ವಿಷಯದಲ್ಲಿ, ಅದೇ ಪೀಠವು ನೀಡಿದ ಮತ್ತೊಂದು ತೀರ್ಪಿನಲ್ಲಿ ಅನುಸರಿಸಲಾಗಿತ್ತು ಎಂದು ಕಂಡುಬರುತ್ತದೆ.

9. ನೆಕ್ಕಂತಿ ರಾಮ ಲಕ್ಷ್ಮಿ ಮೊಕದ್ದಮೆಯ ವಿಷಯಕ್ಕೆ ಸಂಬಂಧಿಸಿದ 2 ನೇ ತೀರ್ಪಿನಲ್ಲಿ, ಪಕ್ಷಕಾರರ ಹಕ್ಕುಗಳನ್ನು ಕುರಿತು ಚರ್ಚಿಸುವಾಗ, ಸರ್ವೋಚ್ಚ ಚ ನ್ಯಾಯಾಲಯವು ಈ ಕೆಳಗಿನಂತೆ ನಿರ್ಣಯಿಸಿರುವುದು ಕಂಡುಬರುತ್ತದೆ:

" 1 ಪಕ್ಷಕಾರರ ಅರ್ಜಿಯ ಆಧಾರದ ಮೇಲಾಗಲಿ ಅಥವಾ ಸ್ವಯಂಪ್ರೇರಣೆಯಿಂದಾಗಲಿ ಕ್ರಮವನ್ನು ಸೂಕ್ತ ಸಮಯದ ಒಳಗಾಗಿ ತೆಗೆದುಕೊಳ್ಳಬೇಕೆಂದು ನಿರ್ಣಯಿಸಲಾಗಿದೆ.ಆ ಕ್ರಮವು, ಗೇಣಿಯ ಬಾಕಿಗಾಗಿ ಮಾರಾಟ ಮಾಡಲಾಗಿದ್ದ ರೈತರ ಕೆಲವು ಜಮೀನುಗಳ ಪುನಃಸ್ಥಾಪನೆಗಾಗಿ ಅಥವಾ I ನೇ ಜನವರಿ, 1939 ರಿಂದ 31 ನೇ

ಡಿಸೆಂಬರ್, 1950 ರವರೆಗೆ ಜಮೀನಿನ ಬಾಕಿಗಳಿಗಾಗಿ ಅವರನ್ನು ಉಧ್ವಾಟನೆ ಮಾಡುವುದರಿಂದ ಉಪಬಂಧಿಸಲಾಗಿರುವ ಅದೇ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಉದ್ಭವಿಸುತ್ತದೆ.ಕೃಷಿ ಚಟುವಟಿಕೆಗಳನ್ನು ಅಸಾಧ್ಯವನ್ನಾಗಿಸಿದ ಕೋಶಿ ನದಿಯಲ್ಲಿನ ಪ್ರವಾಹದ ಕಾರಣದಿಂದ ರೈತರಿಗೆ ಈ ಪರಿಹಾರವನ್ನು ನೀಡಲಾಗಿತ್ತು.ಪುನಃಸ್ಥಾಪನೆಗಾಗಿ ಅರ್ಜಿಯನ್ನು 24 ವರ್ಷಗಳ ನಂತರ ಸಲ್ಲಿಸಲಾಗಿತ್ತು ಮತ್ತು ಅದಕ್ಕೆ ಅನುಮತಿ ನೀಡಲಾಗಿತ್ತು.ಹಾಗೆ ಮಾಡುವುದು ಅನುಚಿತವೆಂದು ಈ ನ್ಯಾಯಾಲಯವು ಎತ್ತಿಹಿಡಿದಿತ್ತು ಎಂಬುದು ಇದರ ಹಿನ್ನಲೆಯಾಗಿದೆ.ಎದುರುದಾರ-ರಾಜಪ್ಪನು ಸಲ್ಲಿಸಿದ ಜಮೀನಿನ ಪುನಃಸ್ಥಾಪನೆಗಾಗಿನ ಪ್ರಸ್ತುತ ಅರ್ಜಿಯನ್ನು, ಅನುಚಿತ ದೀರ್ಘಾವಧಿ ನಂತರ ಸಲ್ಲಿಸಲಾಗಿತ್ತು ಮತ್ತು ಆ ಕಾರಣದ ಮೇಲೆ ವಜಾಗೊಳಿಸಬೇಕೆಂಬುದಕ್ಕೆ ಗುರಿಯಾಗಿತ್ತು."

10. ಅಂಥ ಅಭಿಪ್ರಾಯಕ್ಕೆ ಬಂದಾಗ, ಸರ್ವೋಚ್ಚ ನ್ಯಾಯಾಲಯವು, (i) ಆರ್. ರುದ್ರಪ್ಪ ವಿರುದ್ಧ-ಜಿಲ್ಲಾಧಿಕಾರಿ - 2001 (5) ಕೆಎಲ್ಜೆ 523;(ii) ಮದ್ದೂರಪ್ಪ ವಿರುದ್ಧ ಕರ್ನಾಟಕ ರಾಜ್ಯ - 2006 ( 4) ಕೆಎಲ್ಜೆ 303; (iii) ಇದರಲ್ಲಿ ವರದಿಯಾದ ಜಿ. ಮರೆಗೌಡ ವಿರುದ್ಧ-ಜಿಲ್ಲಾಧಿಕಾರಿ, ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ ಮತ್ತು ಇತರರು - 2000 (2) ಕೆಎಲ್ಜೆ ಎಸ್.ಎನ್. 4 ಬಿ, ಈ ಮೊಕದ್ದಮೆಗಳ ವಿಷಯದಲ್ಲಿ ನಿರ್ಧರಿಸಲಾದಂತೆ ಪುನಃಸ್ಥಾಪನೆಗೆ ಸಂಬಂಧಿಸಿದಂತೆ ಚಾಲ್ತಿಯಲ್ಲಿದ್ದ ಕಾನೂನನ್ನು ವ್ಯಕ್ತವಾಗಿಯೇ ತಳ್ಳಿಹಾಕಿತು.ಸದರಿ ತೀರ್ಪುಗಳನ್ನು ತಳ್ಳಿಹಾಕುವಾಗ ಸರ್ವೋಚ್ಚ ಚ ನ್ಯಾಯಾಲಯವು, ಪಿಟಿಸಿಎಲ್ ಅಧಿನಿಯಮದ 5 ನೇ ಪ್ರಕರಣವು ಉಪಬಂಧಿಸಿದಂತೆ ಯಾವುದೇ ಪರಿಮಿತಿಯಿಲ್ಲವೆಂದು ಮತ್ತು ಯಾವುದೇ ಸಮಯದಲ್ಲಾದರೂ ಅರ್ಜಿಯನ್ನು ಸಲ್ಲಿಸಬಹುದಾದ್ದರಿಂದ ರದ್ದುಗೊಳಿಸಲಾಯಿತೆಂದು ಅಭಿಪ್ರಾಯಪಟ್ಟಿದೆ.

11. ಆದುದರಿಂದ, ಅದೇ ಸಾದೃಶ್ಯವನ್ನು ಅನ್ವಯಿಸುವ ಮೂಲಕ ಈ ನ್ಯಾಯಾಲಯವು, ಪುನಃಸ್ಥಾಪನೆಯನ್ನು ಕೋರಿ 3 ನೇ ಎದುರುದಾರಳು ಸಲ್ಲಿಸಿದ ಅರ್ಜಿಯನ್ನು ತಳ್ಳಿಹಾಕಿ ನೀಡಿದ 1 ನೇ ಮತ್ತು 2 ನೇ ಎದುರುದಾರರ, ಎಂದರೆ ಕ್ರಮವಾಗಿ ಜಿಲ್ಲಾಧಿಕಾರಿಗಳ ಮತ್ತು ಸಹಾಯಕ ಆಯುಕ್ತರ ತೀರ್ಪು ನ್ಯಾಯಯುತವಾದುದಾಗಿದೆ ಮತ್ತು ಸೂಕ್ತವಾದುದಾಗಿದೆ ಎಂದು ನಿರ್ಣಯಿಸಿದೆ.ಇದಲ್ಲದೆ, ಈ ನ್ಯಾಯಾಲಯವು ಅಂಥ ಅಭಿಪ್ರಾಯವನ್ನು ತಾಳುವಾಗ, ರಿಟ್ ಅರ್ಜಿಸಂಖ್ಯೆ: 24411/2005 (ಎಸ್ಸಿ/ಎಸ್ಟಿ) ರಲ್ಲಿ ಈ ನ್ಯಾಯಾಲಯದ ಮಾನ್ಯ ಏಕಪೀಠ ನ್ಯಾಯಾಧೀಶರ ತೀರ್ಪನ್ನು ಸಹ ತಳ್ಳಿಹಾಕಬೇಕಾದ ಅಗತ್ಯವಿದೆ ಎಂದು ನಿರ್ಧರಿಸಿದೆ.ಇದಲ್ಲದೆ ಹಾಗೆ ಮಾಡುವಾಗ, ಈ ನ್ಯಾಯಾಲಯವು ಮೂಲ ಮಂಜೂರಾತಿ ಪಡೆದಾತನ ಪತ್ನಿಯಾಗಿರುವ 3 ನೇ ಎದುರುದಾರಳು, 2002 ನೇ ಸಾಲಿನಲ್ಲಿ ಆಕೆಯ ಪತಿಯು ಮರಣ ಹೊಂದಿದ ನಂತರ ಮಾತ್ರವೇ ಜಮೀನಿನ ಪುನಃಸ್ಥಾಪನೆ ಕೋರಿರುತ್ತಾಳೆಂದು ಅಭಿಪ್ರಾಯಪಟ್ಟಿದೆ.ವಾಸ್ತವವಾಗಿ, ಈ ಮೊದಲು, 2 ನೇ ಎದುರುದಾರರಾದ ಸಹಾಯಕ ಆಯುಕ್ತರಿಂದ 3 ನೇ ಎದುರುದಾರಳ ಪತಿಯು ಅನುಮತಿಯನ್ನು ಪಡೆದ ನಂತರ, ಇದರಲ್ಲಿನ ಮೇಲ್ಮನವಿದಾರನಿಗೆ ಪ್ರಶ್ನೆಯಲ್ಲಿರುವ ಸ್ವತ್ತನ್ನು ಮಾರಾಟ ಮಾಡಿರುವುದು ಅಸ್ತಿತ್ವದಲ್ಲಿದ್ದಾಗ, ತನಗಾಗಿ ಆ ಜಮೀನಿನ ಪುನಃಸ್ಥಾಪನೆ ಕೋರಲು ಯಾವುದೇ ಪ್ರಯತ್ನವನ್ನು ಎಂದಿಗೂ ಆತನು ಮಾಡಿರಲಿಲ್ಲ.

12. ಆತನು ಮರಣಿಸಿದ ನಂತರ, ಮೊದಲ ಸಲ ಆತನ ಪತ್ನಿಯು, ಪಿಟಿಸಿಎಲ್ ಅಧಿನಿಯಮ, 1978 ರ ಉಪಬಂಧಗಳ ಮೇರೆಗೆ ಮಾತ್ರವಲ್ಲದೆ, ಸಹಾಯಕ ಆಯುಕ್ತರು, ಅಷ್ಟೇ ಅಲ್ಲದೆ ಜಿಲ್ಲಾಧಿಕಾರಿಗಳ ಮುಂದಿನ ವ್ಯವಹರಣೆಗಳಲ್ಲಿ ಆಕೆಯ ಪತಿಯಿಂದ ಕ್ರಯಪತ್ರವನ್ನು ಪಡೆಯುವಲ್ಲಿ ಇದರಲ್ಲಿನ ಮೇಲ್ಮನವಿದಾರನು ಮೋಸವನ್ನು ಮಾಡಿದ್ದಾನೆ ಎಂಬುದನ್ನು ಸಾಧಿಸಲು ಆಕೆಗೆ ಸಾಧ್ಯವಾಗದೆ ಇದ್ದ ಕಾರಣದ ಆಧಾರದ ಮೇಲೆ ಸಹ ಆಕೆಯು ಪುನಃಸ್ಥಾಪನೆ ಕೋರಲು ಪ್ರಯತ್ನಿಸಿದ್ದಾಳೆಂಬುದು ಸಹ ಕಂಡುಬರುತ್ತದೆ.ಇದನ್ನು ಮಾನ್ಯ ಏಕಪೀಠ ನ್ಯಾಯಾಧೀಶರ ಮುಂದೆ ಅನುಸರಿಸದೇ ಇದ್ದಾಗ್ಯೂ, ಮಾನ್ಯ ಏಕಪೀಠ ನ್ಯಾಯಾಧೀಶರು, ಜಮೀನು ಮಂಜೂರಾತಿ ನಿಯಮಗಳ ಉಪಬಂಧಗಳಿಗೆ ಸಂಬಂಧಿಸಿದಂತೆ ಬೇರೆ ರೀತಿಯಲ್ಲಿ ವ್ಯವಹರಿಸಿದ್ದಾರೆ ಮತ್ತು ಮನವಿಯನ್ನು ಅದರ ಗುಣಾರ್ಹತೆಗಳ ಆಧಾರದ ಮೇಲೆ ಪರಿಗಣಿಸುವುದಕ್ಕೆ ಬದಲಾಗಿ ಪ್ರಸ್ತುತ ಸಂಗತಿಗೆ ಅದನ್ನು ಅನ್ವಯಿಸಿದ್ದಾರೆ.

13. ವಿಷಯಕ್ಕೆ ಸಂಬಂಧಿಸಿದ ಈ ದೃಷ್ಟಿಕೋನದಿಂದ, 1 ನೇ ಎದುರುದಾರರಾದ ಜಿಲ್ಲಾಧಿಕಾರಿಗಳ ಮುಂದೆ ಸಲ್ಲಿಸಿದ ಅಪೀಲಿನಲ್ಲಿ, ಅವರು ಸರಿಯಾಗಿಯೇ ಸಮರ್ಥಿಸಿರುವ, ಪುನಃಸ್ಥಾಪನೆಗಾಗಿ ಕೋರಿದ್ದ 3 ನೇ ಎದುರುದಾರಳ ಅರ್ಜಿಯನ್ನು ವಜಾಗೊಳಿಸುವಲ್ಲಿ ಸಹಾಯಕ ಆಯುಕ್ತರ ಆದೇಶವನ್ನು ವಿಪರ್ಯಯಗೊಳಿಸಿ

ಹೊರಡಿಸಿರುವ ರಿಟ್ ಅರ್ಜಿಸಂಖ್ಯೆ: 24411/2005 ರಲ್ಲಿ ಮಾನ್ಯ ಏಕಪೀಠ ನ್ಯಾಯಾಧೀಶರ ಆದೇಶವನ್ನು ಸಮರ್ಥಿಸಲು ಯಾವುದೇ ನ್ಯಾಯಯುತ ಕಾರಣಗಳು ಈ ನ್ಯಾಯಾಲಯಕ್ಕೆ ಕಂಡುಬಂದಿರುವುದಿಲ್ಲ.

14. ಈ ಅಭಿಪ್ರಾಯದೊಂದಿಗೆ, ಮಾನ್ಯ ಏಕಪೀಠ ನ್ಯಾಯಾಧೀಶರು ಹೊರಡಿಸಿದ ಆದೇಶವನ್ನು ತಳ್ಳಿಹಾಕುವ ಮೂಲಕ ಮತ್ತು ತತ್ಪರಿಣಾಮವಾಗಿ 2 ನೇ ಮತ್ತು 1 ನೇ ಎದುರುದಾರರ ಆದೇಶವನ್ನು ಸ್ಥಿರೀಕರಿಸಿ ಮೇಲ್ಮನವಿದಾರನು ಖರೀದಿಸಿದ ಜಮೀನಿನ ಪುನಃಸ್ಥಾಪನೆ ಕೋರಿ, 3 ನೇ ಎದುರುದಾರಳ ಮನವಿಯನ್ನು ತಿರಸ್ಕರಿಸುವ ಮೂಲಕ ಈ ಅಪೀಲಿಗೆ ಅನುಮತಿ ನೀಡಲಾಗಿದೆ.